ಈ ಪ್ರದರ್ಶನಗಳನ್ನು ಶ್ಲಾಘಿಸಿದರು. 1959ರಲ್ಲಿ ದೆಹಲಿಯ ವಿಜ್ಞಾನ ಭವನದಲ್ಲಿ ಮತ್ತೊಮ್ಮೆ ಪ್ರದರ್ಶನ ನೀಡುವಂತೆ ಕೋರಿಕೆ ಬಂದಿದ್ದು ನೆನಪಿದೆ ನನಗೆ. ವಿಮರ್ಶಕರು, ವಿದ್ವಾಂಸರು ಮತ್ತು ಪ್ರೇಕ್ಷಕರು ಸೇರಿದ್ದ ಆ ಮಹಾನ್ ಸಭೆಯಲ್ಲಿ ನನ್ನ ಗುರುಗಳಾದ ಮಣಿರಾಮ್ ದತ್ತ ಮುಕ್ತಿಯಾರ್ ಅವರು ತಮ್ಮ 85ನೇ ವರ್ಷದಲ್ಲಿ 'ಕೋಲ್' ಹಿಡಿದು ಅದ್ಭುತವಾಗಿ ನರ್ತಿಸಿದ್ದು ಬಹಳ ಸುದ್ದಿಯಾಗಿತ್ತು. ಅಂತಹ ಅದ್ಭುತ ಸತ್ರಿಯಾ ನೃತ್ಯ ಪ್ರದರ್ಶನವನ್ನು ಹಿಂದೆಂದೂ ದೆಹಲಿ ಕಂಡಿರಲಿಕ್ಕಿಲ್ಲ. 1963ರಲ್ಲಿ ಗುರುಗಳಿಗೆ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ದೊರೆತಾಗ ಇಡೀ ಅಸ್ಸಾಮ್ ಹರ್ಷಗೊಂಡಿತು. ಯಾಕೆಂದರೆ, ಸತ್ರಿಯಾ ಪರವಾದ ಇಡೀ ಆಂದೋಲನದಲ್ಲಿ ಇದು ಪ್ರಮುಖವಾದ ಗುರುತಿಸುವಿಕೆಯಾಗಿತ್ತು.

ಸತ್ರಿಯಾ ನೃತ್ಯಕ್ಕೆ ಶಾಸ್ತ್ರೀಯ ಮನ್ನಣೆಯೆಂಬುದು ತುರ್ತಾಗಿ ಸಿಕ್ಕಿದ್ದೇನೂ ಅಲ್ಲ. ನಿರಂತರವಾಗಿ ಸಂವಾದ, ಉಪನ್ಯಾಸ, ಪ್ರಾತ್ಯಕ್ಷಿಕೆ ಮತ್ತು ನೃತ್ಯ ಪ್ರಸ್ತುತಿಗಳು ನಡೆಯುತ್ತಲೇ ಇದ್ದವು. ಹಿರಿಯರಾದ ಡಾ. ಮಹೇಶ್ವರ್ ನಿಯೋಗ್ ಮತ್ತು ಗುರು ಮಣಿರಾಮ್ ದತ್ತ ಮುಕ್ತಿಯಾರ್ ಅವರು ನಮ್ಮನ್ನು ಅಗಲಿದರು. ಆಮೇಲೆ ದೀರ್ಘಕಾಲದ ನಂತರ, ಅಂದರೆ 1995ರ ಸಂದರ್ಭದಲ್ಲಿ ಮತ್ತೆ ವಿದ್ವಾಂಸರು ಮತ್ತು ಕಲಾವಿದರು, ತಜ್ಞರು ಈ ಆಂದೋಲನಕ್ಕೆ ವೇಗ ನೀಡಿದರು. 'ಫೋರಂ ಫಾರ್ ಶಂಕರದೇವ ಸ್ಟಡೀಸ್' ವತಿಯಿಂದ ಸತ್ರಿಯಾ ಕುರಿತಂತೆ ಸರಣಿ ಉಪನ್ಯಾಸಗಳು ನಡೆದವು. ದೇಶದ ವಿವಿಧೆಡೆಗಳಲ್ಲಿ ಸತ್ರಿಯಾ ನೃತ್ಯವನ್ನು ಬಹಳ ಉತ್ಸಾಹದಿಂದ ಪ್ರಸ್ತುತಪಡಿಸಲಾಯಿತು. ಸರಣಿ ಉಪನ್ಯಾಸಗಳ ದೆಸೆಯಿಂದಾಗಿ ಸತ್ರಿಯಾ ನೃತ್ಯದ ಬಗ್ಗೆ ರಾಜ್ಯದ ಹೊರಭಾಗಗಳಲ್ಲಿಯೂ ಅರಿವು ಮೂಡಿತು. ನಾನು ಈ ಸಂದರ್ಭದಲ್ಲಿಯೇ ದೊಡ್ಡ ತಂಡವನ್ನು ಕಟ್ಟಿಕೊಂಡು, ಶಾಂತಿನಿಕೇತನದಲ್ಲಿ ಪ್ರದರ್ಶನ ನೀಡಿದ್ದೆ. ದೆಹಲಿ ಮತ್ತು ಕೋಲ್ಕತದಲ್ಲಿ ಸತ್ರಿಯಾದ ಪರಂಪರೆಯನ್ನು ಪ್ರತಿನಿಧಿಸುವ ಅವಕಾಶ ನನಗೆ ಸಿಕ್ಕಿತು.

ಸತ್ರಿಯಾದ ಶೈಕ್ಷಣಿಕ ಉಪನ್ಯಾಸ ಮತ್ತಿತರ ಕಾರ್ಯಚಟುವಟಿಕೆಗಳು, ನೃತ್ಯದ ಪ್ರದರ್ಶನಗಳ ನೇತೃತ್ವವನ್ನು ಡಾ. ಪ್ರದೀಪ್ ಜ್ಯೋತಿ ಮಹಾಂತ ಅವರು ವಹಿಸಿಕೊಂಡು ಶ್ರಮವಹಿಸಿ ಕೆಲಸ ಮಾಡಿದರು. ಈ ಉಪನ್ಯಾಸ, ಕಾರ್ಯಾಗಾರ, ಪ್ರಾತ್ಯಕ್ಷಿಕೆಗಳು ಭಾರತೀಯ ಕಲಾಕ್ಷೇತ್ರದ ಗಮನ ಸೆಳೆದವು ಎನ್ನಬಹುದು. ನಂತರದಲ್ಲಿ ಡಾ. ಪ್ರದೀಪ್ ಮಹಾಂತ ಮತ್ತು ಕಲಾವಿದ ರಾಸೇಶ್ವರ್ ಸೈಕಿಯ ಬಾರ್ಬಾಯನ್ ಅವರು ಆಂದೋಲನಕ್ಕೆ ಸರಿಯಾದ ದಿಕ್ಕು ತೋರಿ ಮುನ್ನಡೆಸಿದರು. ಅದರ ಫಲವಾಗಿ ಸತ್ರಿಯಾ ಕಲಾಪ್ರಕಾರವು ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಗಮನ ಸೆಳೆಯುವಲ್ಲಿ ಯಶಸ್ವಿಯಾಯಿತು. ಅಸ್ಸಾಮ್‌ನ ರವೀಂದ್ರಭವನದಲ್ಲಿ ಭಾರೀ ದೊಡ್ಡ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅಸ್ಸಾಮ್‌ನ ಮತ್ತು ಆಸುಪಾಸಿನ ಸತ್ರಿಯಾ ನೃತ್ಯ ಕಲಾವಿದರು ಅಲ್ಲಿ ಪ್ರದರ್ಶನಗಳನ್ನು ನೀಡಿದರು. ಆಹಾ... ಸತ್ರಿಯಾದಲ್ಲಿಯೇ ಎಷ್ಟೊಂದು ವಿಧಗಳಿವೆ. ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯ ಪ್ರಭಾವವನ್ನು ಸ್ವೀಕರಿಸಿ ವರ್ಚಸ್ಸನ್ನು ಹೆಚ್ಚಿಸಿಕೊಂಡ ನೃತ್ಯ... ಭಿನ್ನ ಭಿನ್ನ ಶೈಲಿಗಳು. ಬಹಳ ಚೆನ್ನಾಗಿ ನಡೆಯಿತು ಪ್ರದರ್ಶನ. ಪ್ರದರ್ಶನವಷ್ಟೇ ಅಲ್ಲ, ನೃತ್ಯದ ರಂಗಭೂಮಿ ಆಯಾಮಗಳ ಕುರಿತು ವಿಚಾರ ಸಂಕಿರಣಗಳು, ಉಪನ್ಯಾಸಗಳು ಕೂಡ ನಡೆದವು. ಒಟ್ಟಿನಲ್ಲಿ ಅಲ್ಲಿ ಸತ್ರಿಯಾ ನೃತ್ಯ ಪ್ರಕಾರದ ವಿರಾಟ್ ರೂಪವನ್ನು ನೋಡುವುದೇ ಒಂದು ಹಬ್ಬವಾಗಿತ್ತು.

ನಾನು ನನ್ನ ಗುರುಗಳನ್ನು ಬಹಳವೇ ನೆನಪಿಸಿಕೊಂಡಿದ್ದೆ. ಈ ಸಂದರ್ಭದಲ್ಲಿ ನನ್ನ ಗುರುಗಳು ಸಂತೋಷಪಡುವಂತಹ, ನನ್ನಲ್ಲಿ ಸಂತೃಪ್ತಿ ಮೂಡಿಸುವಂತಹ ಒಂದು ಘಟನೆ ನಡೆಯಿತು. ಸತ್ರಿಯಾದ ವೈವಿಧ್ಯವನ್ನು ಗಮನಿಸಿದ ಪ್ರಸಿದ್ಧ ವಿಮರ್ಶಕರಾದ ಡಾ. ಸುನೀಲ್ ಕೊಠಾರಿ ಅವರೊಂದು ಪ್ರಶ್ನೆ ಕೇಳಿದರು. ಇಷ್ಟೊಂದು ವೈವಿಧ್ಯಮಯ ನೃತ್ಯದ ಪ್ರದರ್ಶನವನ್ನು ನೋಡಿದ ಮೇಲೆ, ಯಾವುದನ್ನು ಶಾಸ್ತ್ರೀಯವಾಗಿ ಸಮರ್ಪಕವಾದ ನೃತ್ಯವೆಂದು ಪರಿಗಣಿಸುವುದು? ಆ ಪ್ರಶ್ನೆಯು ಸಹಜವೇ ಆಗಿತ್ತು. ಆಗ ಸತ್ರಿಯಾ ನೃತ್ಯಕಲಾವಿದರು, ವಿದ್ವಾಂಸರು ಆಗಿದ್ದ ಜತಿನ್ ಗೋಸ್ವಾಮಿ ಅವರು ಸತ್ರಿಯಾದ ಸೂಕ್ಷ್ಮಗಳ ಕುರಿತು ವಿವರವಾಗಿ ಮಾತನಾಡಿದರು. ಅಲ್ಲದೆ, ಅಧ್ಯಾಪಕ ಘನಕಾಂತಾ ಬೋರಾ ಅವರು ಪ್ರಸ್ತುತಪಡಿಸಿದ ನೃತ್ಯ ಶೈಲಿಯು ಸಮರ್ಪಕವಾದ ಶಾಸ್ತ್ರೀಯ ಚೌಕಟ್ಟಿಗೆ ಹೊಂದಿಕೊಳ್ಳುವಂತಹುದು ಎಂದು ನುಡಿದರು. ಹೀಗೆ ದೀರ್ಘ ಕಾಲದ ಪ್ರಯತ್ನದ ಬಳಿಕ ಡಾ. ಭೂಪೇನ್